ನೋಟೀಸ್.

ತಾರೀಖು 12ನೇ ನವೆಂಬರ್ 1896ನೇ ಇಸವಿ, ಬೆಂಗಳೂರು.

ಸದರ್ಹ ಮೆರಾಟಾ ರೈಲ್ವೆ ಗೂಡ್‌ಷಡ್ ಬಡಾವಣಿ ಬಗ್ಗೆ ತೆಗೆದುಕೊಂಡು ಯಿರುವ ಇದರಡಿ ಕಂಡಿರುವಂಥಾ ಕಟ್ಟಡ ಮತ್ತು ಖಾಲಿ ಜಮೀನ್‌ಗಳಿಗೆ ಕರಾವ್ ಗ ಫೈಸಲಾಗಿ ಯಿರುವ ಹಣವನ್ನು ಚಾಲ್ತಿ ಇಸವಿ ನವೆಂಬರ್ 30ನೇ ತಾರೀಖು ಲಾಗಾಯತು ಸ್ವಂತ ಕರ್ತರಿಗೆ ಪಾವತಿ ಮಾಡಲ್ಪಡುತ್ತೆ. ಈ ಕಂರ್ಪೆನ್ಸೇಷ್ಣ ಮೊಬಲಗಿಗಾಗಲೇ ಅಥವಾ ಆ ಪೈಕಿ ಯಾವ ಹಿಸ್ಸೆಗಾಗಲೇ ನ್ಯಾಯವಾದ ಹಕ್ಕು ಯಿರುವದಾಗಿ ಎಣಿಸುವ ಸಮಸ್ತರೂ ಈ ನವೆಂಬರ್ ತಿಂಗಳು 30ನೇ ತಾರೀಖು ವಳಗಾಗಿ ಸ್ವಂತವಾಗಿ ಆಗಲೀ ಅಧಿಕಾರ ಪಡೆದ ಮುತಾಲೀಕರ ಮೂಲಕವಾಗಿ ಆಗಲೀ ಈ ಕೆಳಗೆ ರುಜು ಮಾಡಿರುವರ ಅಥವಾ ಅವರ ಅಸಿಸ್ಟೆಂಟರ ರೂಬರೂ ತಮ್ಮ ತಮ್ಮ ಹಕ್ಕುಗಳನ್ನು ನಮೂದಿಸಿ ಅರ್ಜಿಗಳನ್ನು ಕೊಡಬೇಕು. ಮೇಲ್ಕಂಡ ವಾಯಿದೆ ತರುವಾಯು ಕಂರ್ಪೆನ್ಸೇಷ್ಣ ವಿಚಾರದಲ್ಲಿ ಯಾವ ವಿಧವಾದ ಹಕ್ಕೂ ಅಂಗೀಕರಿಸುವದಿಲ್ಲಾ, ತಿಳಿಯುವದು.

ಸದರ್ಹ ಮೆರಾಟಾ ರೈಲ್ವೆ ಗೂಡ್‌ಷಡ್ ಗೋಸ್ಕರ ಬೆಂಗಳೂರು ಕಸಬಾ ಗೌಡನ ಪೇಟೆಯಲ್ಲಿ ತೆಗೆದುಕೊಂಡ ಕಟ್ಟಡ ಮತ್ತು ಖಾಲಿ ನಿವೇಶನಗಳು ಇವುಗಳಿಗಾಗಿ ಕೊಡಲ್ಪಟ್ಟ್ಟ ಕಂರ್ಪೆನ್ಸೇಷ್ಣ ಮೊಬಲಗು ತೋರಿಸುವ ತಖ್ತೆ.

ಸೀರಿಯಲ್ ನಂಬರು.	ತಾಕು ನಂಬರು.	ಹಕ್ಕುದಾರನ ಹೆಸರು.	ತಾಕುಗಳ ಪಟ್ಟು ವಿಸ್ತೀರ್ಣ ಸಲಿಗೆಡ	ತರಹೆ.	ಕೊಡಲ್ಪಟ್ಟ ಕಂರ್ಪೆನ್ಸೇಷ್ಣ.											
					ಜಮೀನ್ ಕ್ರಯ.			ಕಟ್ಟಡದ ಕ್ರಯ.			ಇತರ ಲಾಗವಡು.			ಜುಮ್ಲಾ.		
1	1	ಹೇಮಾಶಾಮಯ್ಯ	1034	ಖಾಲಿ ನಿವೇಶನ	1034	0	0	0	0	0	166	0	0	1200	0	0
2	4	ಹೇಮಾಶಾಮಯ್ಯ	668	ಡಿಟೋ	668	0	0	0	0	0	100	0	0	768	0	0
3	6	ಮತ್ತು ತಿಪ್ಪಯ್ಯ ಮೇಸ್ತ್ರೀ ನಾರಣಪ್ಪ	791	ಪಕ್ಕಾ ಚತಾ	791	0	0	2775	0	0	834	0	0	4400	0	0
4	8	ಮಂಜೇಪಲ್ಲಿ ಶೀತಾರಾಮಯ್ಯ ಮತ್ತು ಎಲ್ಲಪ್ಪ	946	ಖಾಲಿ ನಿವೇಶನ	946	0	0	0	0	0	142	0	0	1088	0	0
5	11 & 12	ಮೇಸ್ತ್ರೀ ಮರಿಯಪ್ಪ	2148	ಪಕ್ಕಾ ಚತಾ	2148	0	0	2923	0	0	929	0	0	6000	0	0
6	15 & ½ of No. 23	ರಾಮಂಣನ ಮಗ ಲಿಂಗಂಣ	2365½	ಖಾಲಿ ನಿವೇಶನ	2365	8	0	0	0	0	355	0	0	2720	8	0
7	No. 16 & ½ of No. 23 & ½ of No. 19	ಎಂಗಣಕೆಪ್ಪ	3624⅜	ಡಿಟೋ	3624	6	0	0	0	0	554	0	0	4178	6	0
8	½ of No. 19	ನರಹರಿರಾವ್	798½	ಡಿಟೋ	798	8	0	0	0	0	121	8	0	920	0	0
9	20	ಪುಟ್ಟಣಂಣ	2006	ಪಕ್ಕಾ ಚತಾ	2006	0	0	5199	0	0	1545	0	0	8750	0	0
10	24	ಮುತ್ತಿನಕಂತೆ ಈ ಶ್ವರಸ್ವಾಮಿ	1928	ಕಲ್ಲಿನಿಂದ ಕಟ್ಟಿದಮಚ	1928	0	0	1143	0	0	929	0	0	4000	0	0
		ಜುಮ್ಲಾ	16309⅜		16309	6	0	12046	0	0	5675	8	0	34024	14	0

ವಿ. ಎ. ನರಸಿಂಹಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮಾ.

ತಾರೀಖು 2ನೇ ನವೆಂಬರ್ 1896ನೇ ಇಸವಿ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು, ಚಿಕ್ಕಬಳ್ಳಾಪುರ ತಾಲ್ಲೂಕು, ನಂದೀ ಸ್ಟೇಟ್ ಫಾರೆ ಸ್ಟ್ಯನಲ್ಲಿ (ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರದ ರಸ್ತೆಗೆ ದಕ್ಷಿಣ ಪ್ರದೇಶದಲ್ಲಿರುವ) ಬಿದರುಗಳನ್ನು 1897ನೇ ಇಸವಿ ಜನವರಿ 1ನೇ ತಾರೀಖು ಲಾಗಾಯಿತು 1898ನೇ ಇಸವಿ ಜೂ ಆಖೈರುವರಿಗೂ ಅಂದರೆ 18 ತಿಂಗಳು ವರಿಗೂ ಕಡದು ಸಾಗಿಸಿಕೊಳ್ಳತಕ್ಕ ಹಕ್ಕು ದಾರಿಯು 1896ನೇ ಇಸವಿ ಡಿಸೆಂಬರು ತಿಂಗಳು 15ನೇ ತಾರೀಖು ಮಧ್ಯಾಹ್ನ 12 ಘಂಟೆ ಸಮಯದಲ್ಲಿ ನಂದೀಮೊಕ್ಕಾಂನಲ್ಲಿ ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಹರಾಜು ಮಾಡಲ್ಪಡುತ್ತೆ.